ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳು 4ನೇ ವರ್ಗ ಹಾಗೂ 7ನೇ ವರ್ಗದವರೆವಿಗೂ ಇದ್ದು ಆ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಹಾಗೂ ಕೋಣೆಗಳ ಸಂಖ್ಯೆ ಎಷ್ಟು?*

ಆ) *ಪ್ರಾಥಮಿಕ ಶಾಲೆಗಳು 4ನೇ ವರ್ಗದಿಂದ 7ನೇ ವರ್ಗದವರೆವಿಗೂ ಇದ್ದು, ಅಲ್ಲಿ ಒಂದು ಎರಡು ಕೋಣೆಗಳು ಇದ್ದು ಒಬ್ಬಿಬ್ಬರು ಶಿಕ್ಷಕರು ಇದ್ದರೆ ಶಿಕ್ಷಣಕ್ಕಾಗಿ ಶಾಲೆಗಳು ಇದ್ದು ಸಹ ಇಲ್ಲದಂತಾಗಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಮಾಡಿದಂತಾಗಿಲ್ಲವೆ?*

ಇ) *ಈ ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಭಾಗದಲ್ಲಿ ಕೋಣೆಗಳು ಹಾಗೂ ಶಿಕ್ಷಕರ ಕೊರತೆಯನ್ನು ಸರಿಪಡಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಯಾವಾಗ ಸುಧಾರಿಸಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ 441

ಕೋಣೆಗಳ ಸಂಖ್ಯೆ 86

ಆ) ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗದಂತೆ ಆಗತ್ಯವಿರುವ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಲಾಗುತ್ತಿದೆ.

ಇ) ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳುವ ಶಾಲಾ ಕಟ್ಟಡಥ ನಿರ್ಮಾಣ ಮತ್ತು ಶಿಕ್ಷಕರ ನೇಮಕಾತಿಯಲ್ಲದೇ ಹೈದ್ರಾಬಾದ್‌ಕರ್ನಾಟಕ ಅಭಿವೃದ್ಧಿ ಯೋಜನೆಯನ್ವಯವೂ ಸಹ ಶಾಲಾ ಕೋಣೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ವಿಶೇಷ ನೇಮಕಾತಿ ನಿಯಮಗಳಡಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿಂದುಳಿದ ವಿಭಾಗದ ಅಭಿವೃದ್ಧಿಗೋಸ್ಕರ ವಿಶೇಷ ಒತ್ತುಕೊಡಲು ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸೇಡಂ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿ

295 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ 1989-90ನೇ ಸಾಲಿನಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿಗಾಗಿ ಖರ್ಚಾಗಿರುವ ಹಣವೆಷ್ಟು (ಕಾಮಗಾರಿವಾರು ವಿವರ ತಿಳಿಸುವುದು)*

ಆ) *ದುರಸ್ತಿ ಮಾಡಿಯೂ ಸಹ ನೀರಾವರಿ ಕೆರೆಗಳ ಕೆಲಸ ಪೂರ್ಣಗೊಂಡು ರೈತರಿಗೆ ಇದರ ಪ್ರಯೋಜನ ದೊರೆಯದೆ ಇರಲು ಕಾರಣಗಳೇನು?*

ಇ) *ಈಗಲೂ ಸಹ ಕಾನಗಡ್ಡಿ ಕೆರೆ ಕಡಲಾಪುರ ಕೆರೆ ಕಾಲುವೆ ಇತ್ಯಾದಿ ಸರಿಯಾಗಿಲ್ಲದೆ ರೈತರಿಗೆ ನೀರಾವರಿ ಬಗ್ಗೆ ತೊಂದರೆ ಉಂಟಾಗಿಲ್ಲವೆ?*

ಈ) *ಇವುಗಳನ್ನು ದುರಸ್ತಿ ಮಾಡಿ ರೈತರಿಗೆ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರೂ. 3,70,820 ಗಳು ವಿವರಗಳು ಹೀಗಿವೆ

	89-90	*90-91*	*91-92*	*92-93*	ಒಟ್ಟು
ಕಾನಾಗಡ್ಡ ಕೆರೆ	6100	44634	133645	7400	191779

ಕಡಲಾಪುರ ಕೆರೆ	41531	108560	28950	-	179041
	47631	153194	162595	7400	370820

ಅ) ಕೆರೆಗಳಲ್ಲಿ ಹೂಳು ತುಂಬಿ ನೀರಿನ ಶೇಖರಣ ಸಾಮರ್ಥ್ಯ ಕಮ್ಮಿ ಆಗಿರುವುದು ಮಳೆ ಪ್ರಮಾಣ ಕಡಿಮೆಯಾಗಿ ಕೆರೆಗಳಿಗೆ ಸಾಕಷ್ಟು ನೀರು ಒದಗದಿರುವುದು ಹಾಗೂ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು ಈ ಪರಿಸ್ಥಿತಿಗೆ ಕಾರಣವಾಗಿದೆ.

ಇ) ಕಾಲುವೆಗಳು ಭಾಗಷಃ ದುಸ್ಥಿತಿಯಲ್ಲಿರುವುದರಿಂದ ಉದ್ದೇಶಿತ ಆಚ್ಚುಕಟ್ಟು ಪ್ರದೇಶಕ್ಕೆ ಪೂರ್ಣವಾಗಿ ನೀರನ್ನು ಒದಗಿಸಲಾಗದೆ ತೊಂದರೆ ಉಂಟಾಗಿದೆ.

~~ಈ) ಹಣದ ಲಭ್ಯತೆಯ ಮೇಲೆ ದುರಸ್ತಿ ಕಾರ್ಯಪನ್ನು ಹಂತ ಹಂತವಾಗಿ~~ ಕೈಗೊಳ್ಳುವ ಉದ್ದೇಶವಿದೆ.

ಮಂತ್ರಿಗಳಿಂದ ಆಸ್ತಿ ಘೋಷಣೆಯ ವಿವರ

544 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಶ್ರೀ ವೀರೇಂದ್ರ ಪಾಟೀಲ್, ಶ್ರೀ ಬಂಗಾರಪ್ಪನವರ ಸರ್ಕಾರಗಳಲ್ಲಿ ಮತ್ತು ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರದಲ್ಲಿ ತಮ್ಮ ಆಸ್ತಿ ಪಾಸ್ತಿಗಳನ್ನು ಘೋಷಿಸಿರುವ ಮಂತ್ರಿಗಳಾರ್ಯಾರು ?*

ಆ) *ಈ ರೀತಿ ಘೋಷಿಸಿಕೊಳ್ಳದಿರುವ ಮಂತ್ರಿಗಳು ಯಾರ್ಯಾರು ಮತ್ತು ಪ್ರತಿಯೊಬ್ಬರ ಆಸ್ತಿ ವಿವರಗಳೇನು ?*

ಇ) *ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಳ್ಳದಿರುವ ಮಂತ್ರಿಗಳ ಬಗ್ಗೆ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) 1) ವಿವರಗಳನ್ನು ಅನುಬಂಧ-11ರಲ್ಲಿ ನೀಡಲಾಗಿದೆ

2) ಆಸ್ತಿ ವಿವರಗಳನ್ನು ಸಲ್ಲಿಸದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಳ್ಳದಿರುವ ಮಂತ್ರಿಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಲೋಕಾಯುಕ್ತ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.